ಮತ್ತು ಸಾಂಪ್ರದಾಯಿಕತೆಯತ್ತ ವಾಲಿದ್ದ ಅಖ್ತರನಿಗೂ ಸಾಕಷ್ಟು ವ್ಯತ್ಯಾಸವಿತ್ತು. ಕಾಲೇಜಿನಲ್ಲಿ ಒಂದೇ ಬಿಂದುವಿನಲ್ಲಿ ಇಬ್ಬರೂ ನಿಂತಿದ್ದರೂ ಅವರ ದಾರಿಗಳು ಭಿನ್ನ ದಿಕ್ಕಿನಲ್ಲಿ ಹೊರಟಿದ್ದವು. ದೇವಸ್ಥಾನ ಮತ್ತು ಪೂಜೆಗಳೆಂದು ಸುತ್ತಾಡುತ್ತಿದ್ದ ಅನಿರುದ್ಧ ವಿಚಾರವಾದಿಯಾಗಿದ್ದ – ಬಹುಶಃ ನಾಸ್ತಿಕತೆಯತ್ತ ತಿರುಗಿರಲಿಕ್ಕೂ ಸಾಕು. ತನ್ನ ನಂಬಿಕೆಗಳನ್ನು ಖಾಸಗಿಯಾಗಿಟ್ಟು ತಿರುಗುತ್ತಿದ್ದ ಅಖ್ತರ ಈಗದನ್ನು ಬಹಿರಂಗವಾಗಿ ಪ್ರದರ್ಶಿಸುತ್ತಿದ್ದ.

ಎರಡನೇ ಬಾರಿ ಕರೆ ಬಂದಾಗ ಅನಿರುದ್ಧ ಅದನ್ನು ಸ್ವೀಕರಿಸಿದ. ಬೆಂಗಳೂರಿಗೆ ಬಂದಾಗ ಹೋಟೆಲಿನಲ್ಲಿ ಉಳಿದುಕೊಂಡು ತನ್ನ ವ್ಯಾಪಾರ–ವ್ಯವಹಾರಗಳನ್ನು ನೋಡಿಕೊಳ್ಳುತ್ತಲೇ ಯಾವತ್ತಾದರೂ ಸಮಯ ಮಾಡಿಕೊಂಡು ಅನಿರುದ್ಧನನ್ನು ಭೇಟಿಯಾಗುತ್ತೇನೆಂದು ಹೇಳಿದ್ದ ಅಖ್ತರ, ಈಗ ಅಹಮದಾಬಾದಿನ ಹೋಟೆಲಿನಲ್ಲಿ ನಡೆದ ವಿಚಾರಣೆಯ ನಂತರ ಮತ್ತೆ ಬೆಂಗಳೂರಿನ ಹೋಟೆಲಿನಲ್ಲಿ ಉಳಿದುಕೊಳ್ಳಲು ಮನಸ್ಸಾಗುತ್ತಿಲ್ಲವೆಂದು ಮತ್ತೆ ಅನಿರುದ್ಧನ ಮನೆಯಲ್ಲಿಯೇ ಉಳಿಯುವುದಾಗಿ ಹೇಳಿದ್ದ.

ಹೋದ ಬಾರಿ ಬಂದಿದ್ದಾಗ ಇದ್ದ ಪರಿಸ್ಥಿತಿಗೂ, ಈಗಿನ ಸಂದರ್ಭಕ್ಕೂ ಬಹಳ ವ್ಯತ್ಯಾಸವಾಗಿತ್ತು. ಸುತ್ತಲಿನ ಪರಿಸರ ಬದಲಾಗಿತ್ತು. ಈ ಬಾರಿ ಅಖ್ತರ ಬರುವುದಕ್ಕೆ ಮೊದಲೇ ಸ್ಥಳೀಯ ಠಾಣೆಯಿಂದ ಅವನನ್ನು ವಿಚಾರಿಸಿ ಅನಿರುದ್ಧನಿಗೆ ಫೋನ್ ಬಂದಿತ್ತು. "ನಂಥಿಂಗ್ ಇನ್ ಪರ್ಟಿಕ್ಯುಲರ್. ಜಸ್ಟ್ ಬಿಯಿಂಗ್ ಕೇರ್ಫುಲ್ ಎಬೌಟ್ ಸೆಕ್ಯೂರಿಟಿ" ಎಂದಷ್ಟೇ ಅನಿರುದ್ಧನಿಗೆ ಅಧಿಕಾರಿಗಳು ಹೇಳಿದ್ದರು. ಅವನು ಬಂದಕೂಡಲೇ ಠಾಣೆಗೆ ಸುದ್ದಿ ಮುಟ್ಟಿಸಬೇಕೆಂದು ಕಾನ್‌ಸ್ಟೆಬಲ್ ಬಂದು ತಾಕೀತು ಮಾಡಿ ತನ್ನ ಮೊಬೈಲ್ ನಂಬರ್ ಕೊಟ್ಟಿದ್ದ.

ಈ ಎಲ್ಲವನ್ನೂ ಕಂಡು ಕವಿತಾಳಿಗೂ ಆತಂಕ ಉಂಟಾಗಿತ್ತು. "ಹೋದಬಾರಿ ಬಂದಾಗ ನಿಮಗೆ ಯಾಕೆ ತೊಂದರೆ ಎಂದು ಸರ್ವೀಸ್ ಅಪಾರ್ಟ್‌ಮೆಂಟಿನಲ್ಲಿ ಇರುತ್ತೇನೆ ಎಂದ ಮನುಷ್ಯ ಮನೆಗೇ ಯಾಕೆ ಬಂದಿದ್ದಾನೆ?" ಎಂದು ರಾತ್ರೆ ಮಲಗುವಾಗ ಅನಿರುದ್ಧನನ್ನು ಪ್ರಶ್ನಿಸಿದಳು. "ಹೋದಬಾರಿ ಬಂದಾಗ ಫನೂಸ್‌ನಲ್ಲಿ ಮಗುವಿಗೆ ಕಬಾಬ್ ತಿನ್ನಿಸಿದ್ದ. ಅದು ನೆನಪಾಗುತ್ತಿಲ್ಲವೇ. ನನಗ್ಯಾಕೋ ಸ್ವಲ್ಪ ಅನುಮಾನವೇ ಮಾರಾಯ" ಎಂದು ತಗಾದೆ ತೆಗೆದಳು.

"ಅರೇ... ಅಶ್ವಿನ್ ತಿನ್ನುತ್ತೇನೆ ಅಂದಿದ್ದ. ಅಖ್ತರ್ ನಮ್ಮ ಅನುಮತಿ ಕೇಳಿದ್ದ. ನೀನೂ ಒಪ್ಪಿದ್ದೆ, ಇದರಲ್ಲಿ ಪಿತೂರಿಯನ್ನು ಹುಡುಕುತ್ತಿದ್ದೀಯಲ್ಲಾ... ನೀನೂ ಸರಿ... " ಅನಿರುದ್ಧ ಸಿಟ್ಟಿನಿಂದಲೇ ಹೇಳಿದ.

"ಆಗ ನನಗೆ ಹಾಗೇ ಅನ್ನಿಸಿತ್ತು. ಆದರೆ ಈಗ ಅನುಮಾನ ಬರುತ್ತಿದೆ. ನಾನು ನನ್ನ ವಿಚಾರ ಹೇಳಿದ್ದೇನೆ. ಮಿಕ್ಕ ಜವಾಬ್ದಾರಿ ನಿನ್ನದು. ಅಷ್ಟೇ ಅಲ್ಲ ಯಾರಾದರೂ ಕೇಳಿದರೆ ಅವನ ಬಗ್ಗೆ ಗೊತ್ತೆಂದು ಹೇಳುವುದಕ್ಕೆ ನಿನ್ನಲ್ಲಿ ಏನಿದೆ? ಏನು ಹೇಳುವುದಕ್ಕೆ ಸಾಧ್ಯ?" ಎನ್ನುವ ಪ್ರಶ್ನೆಯನ್ನ ಕೇಳಿ ವಿರುದ್ಧ ದಿಕ್ಕಿನಲ್ಲಿ ತಿರುಗಿ ಮಲಗಿದಳು.

ಹೀಗೆ ಮಾತು ಮುಂದುವರೆಯುತ್ತಿದ್ದಂತೆ ಅನಿರುದ್ಧನ ಮನಸ್ಸಿನಲ್ಲೂ ಕೆಲವು ಅನುಮಾನಗಳು ಬರತೊಡಗಿದವು. ಒಟ್ಟಾರೆ ಸಂದರ್ಭವೇ ಸರಿಯಿರಲಿಲ್ಲ. ಯೌವನ ಕಾಲದ ಖಾಸಾ ದೋಸ್ತ. ಹೋದಬಾರಿ ಬಂದಾಗ ಚೆನ್ನಾಗಿ ಬೆಚ್ಚಗಿದ್ದ ಗೆಳೆಯ... ಇದ್ದಕ್ಕಿದ್ದಂತೆ ಅಪರಿಚಿತನಾಗುತ್ತಿದ್ದಂತೆ ಅನಿರುದ್ಧನಿಗೆ ಅನ್ನಿಸಿತ್ತು.

ಎರಡು ದಿನಗಳ ಕಾಲ ಅಖ್ತರ ಅನಿರುದ್ಧನ ಮನೆಯಲ್ಲಿ ಕಳೆದ. ಬೆಚ್ಚಗೆ ಪ್ರಾರಂಭವಾಗಿದ್ದ ಅವರ ಸಂಭಾಷಣೆ ಹೊರಡುವ ಸಮಯಕ್ಕೆ ವ್ಯಾವಹಾರಿಕವಾಗಿ ಉಳಿದುಹೋಯಿತು. ಯಾಕೋ ಈ ಬಾರಿಯ ಯಾತ್ರೆ ಸರಿಯಾಗಿ ಆಗಲಿಲ್ಲವೆಂದೇ ಅಖ್ತರನಿಗನ್ನಿಸಿತು. ಮತ್ತೆ ಭಾರತಕ್ಕೆ ಬರಬೇಕೋ